## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಕಿರುಪರಿಚಯದ ಕಿರುಹೊತ್ತಿಗೆ ಮುದ್ರಣ ಮಾಡಿದ ವೆಚ್ಚದ ಬಾಬ್ತನ್ನು ಪಾವತಿಸುವ ಕುರಿತು.

**ಉಲ್ಲೇಖ :** ಪ್ರೋಜೆಕ್ಟ್ ಕಮ್ಯುನಿಕೇಶನ್ಸ್, ಎಇಸಿಎಸ್ ಲೇಔಟ್, ಸಂಜಯನಗರ, ಬೆಂಗಳೂರು-94 ಇವರ ಬಿಲ್ಲು ಸಂಖ್ಯೆ: 11, ದಿನಾಂಕ: 09.07.2012.

**ಪ್ರಸ್ತಾವನೆ:**

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಕಿರುಪರಿಚಯವನ್ನೊಳಗೊಂಡ ಕನ್ನಡ ಭಾಷೆಯ 700 ಪ್ರತಿಗಳು ಹಾಗೂ ಆಂಗ್ಲ ಭಾಷೆಯ 800 ಕಿರುಹೊತ್ತಿಗೆಗಳನ್ನು ಮುದ್ರಿಸಿ ಸರಬರಾಜು ಮಾಡಿದ ಮೆ: ಪ್ರೋಜೆಕ್ಟ್ ಕಮ್ಯುನಿಕೇಶನ್ಸ್, ಎಇಸಿಎಸ್ ಲೇಔಟ್, ಸಂಜಯನಗರ, ಬೆಂಗಳೂರು-94 ಇವರು ಉಲ್ಲೇಖಿತ ಪತ್ರದೊಂದಿಗೆ ಈ ಸಂಬಂಧದಲ್ಲಿ ತಗುಲಿದ ವೆಚ್ಚ ₹98,000-00 ಗಳನ್ನು ಪಾವತಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ ಮೆ: ಪ್ರೋಜೆಕ್ಟ್ ಕಮ್ಯುನಿಕೇಶನ್ಸ್, ಎಇಸಿಎಸ್ ಲೇಔಟ್, ಸಂಜಯನಗರ, ಬೆಂಗಳೂರು-94 ಸಂಸ್ಥೆಯು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಕಿರುಪರಿಚಯವನ್ನೊಳಗೊಂಡ ಕನ್ನಡ ಭಾಷೆಯ 700 ಪ್ರತಿಗಳು ಹಾಗೂ ಆಂಗ್ಲ ಭಾಷೆಯ 800 ಕಿರುಹೊತ್ತಿಗೆಗಳನ್ನು ಮುದ್ರಿಸಿ ಸರಬರಾಜು ಮಾಡಿರುವ ವೆಚ್ಚ ₹98,000-00 ಗಳನ್ನು ಭರಿಸಲು ಕರ್ನಾಟಕ ಪಂಚಾಯತ್ ರಾಜ್ ಲೆಕ್ಕ ಶೀರ್ಷಿಕೆ **"2515-00-101-0-09-101"** (ಯೋಜನೆ) ರಡಿ ಭರಿಸಲು ಸರ್ಕಾರವು ನಿರ್ಧರಿಸಿದೆ. ಆದುದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 35 ಕವಿ 2012, ಬೆಂಗಳೂರು, ದಿನಾಂಕ: 25.07.2012**

ಪ್ರಸ್ತಾವನೆಯಲ್ಲಿನ ವಿವರಿಸಿರುವಂತೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಕಿರುಪರಿಚಯವನ್ನೊಳಗೊಂಡ ಕನ್ನಡ ಭಾಷೆಯ 700 ಪ್ರತಿಗಳು ಹಾಗೂ ಆಂಗ್ಲ ಭಾಷೆಯ 800 ಕಿರುಹೊತ್ತಿಗೆಗಳನ್ನು ಮುದ್ರಿಸಿ ಸರಬರಾಜು ಮಾಡಿರುವ ಸಂಬಂಧ ತಗುಲಿದ ವೆಚ್ಚ ₹98,000-00 (ರೂಪಾಯಿ ತೊಂಬತ್ತೆಂಟು ಸಾವಿರಗಳು ಮಾತ್ರ) ಗಳನ್ನು ಪ್ರೋಜೆಕ್ಟ್ ಕಮ್ಯುನಿಕೇಶನ್ಸ್, ಎಇಸಿಎಸ್ ಲೇಔಟ್, ಸಂಜಯನಗರ, ಬೆಂಗಳೂರು-94 ಇವರಿಗೆ ಪಾವತಿಸಲು ಮಂಜೂರಾತಿ ನೀಡಿದೆ.

ಈ ಮೇಲಿನ ವೆಚ್ಚವನ್ನು 2012-13ನೇ ಸಾಲಿನ ಆಯವ್ಯಯದಲ್ಲಿ ಕರ್ನಾಟಕ ಪಂಚಾಯತ್ ರಾಜ್ ರಡಿಯ ಲೆಕ್ಕ ಶೀರ್ಷಿಕೆ **"2515-00-101-0-09-101"** (ಯೋಜನೆ) ಭರಿಸುವುದು.

ಈ ಆದೇಶವನ್ನು ಸರ್ಕಾರದ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 2 ಟಿಎಫ್‌ಪಿ 2010, ದಿ: 30.04.2010 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Radhakrishna

(ಕೆ. ರಾಧಾಕೃಷ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ) (ಜಿ.ಪಂ.)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

(ಮು.ತಿ.ನೋ.)

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
3. ಪ್ರಧಾನ ಸಂಪಾದಕರು, ಕರ್ನಾಟಕ ವಿಕಾಸ, ಗ್ರಾ.ಅ.ಪಂ.ರಾಜ್ ಇಲಾಖೆ, ಬೆಂಗಳೂರು.
4. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

**ಪ್ರತಿ ಮಾಹಿತಿಗಾಗಿ:**

ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾ.ಅ.ಪಂ.ರಾಜ್ ಇಲಾಖೆ ಇವರಿಗೆ ಆಪ್ತ ಕಾರ್ಯದರ್ಶಿಗಳ ಮೂಲಕ.